**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ: ಕೇಂದ್ರ ಕಛೇರಿ: ಬೆಂಗಳೂರು**

**ಪತ್ರಿಕಾ ಪ್ರಕಟಣೆ**

**ವಿಷಯ: ಗಣರಾಜ್ಯೋತ್ಸವ ಸಮಾರಂಭ**

**ಹಾಗೂ**

**ಮೊದಲ ಬಾರಿಗೆ ಕೆಎಸ್ಆರ್‌ಟಿಸಿ ಭದ್ರತಾ ಮತ್ತು ಜಾಗೃತದಳದ ಸಿಬ್ಬಂದಿಗಳ ತಂಡವು ಮಾಣಿಕ್ ಷಾ ಮೈದಾನದಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದ ಪೆರೇಡ್‌ನಲ್ಲಿ ಭಾಗವಹಿಸಿದ್ದರು**

ಶೈಕ್ಷಣಿಕ ರಂಗದಲ್ಲಿ ಕರಾರಸಾನಿಗಮದ ನೌಕರರು ಮತ್ತು ಅಧಿಕಾರಿಗಳ ಮಕ್ಕಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯ ಪರೀಕ್ಷೆಯಲ್ಲಿ ಶೇಕಡ 70ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಮತ್ತು ಪದವಿ ಪರೀಕ್ಷೆಯಲ್ಲಿ ಶೇಕಡ 60 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ **ನಿಗಮದ ನೌಕರರ ಮತ್ತು ಅಧಿಕಾರಿಗಳ ಮಕ್ಕಳಿಗೆ ಗರಿಷ್ಠ ರೂ.4000/- ವರೆಗೆ ನಗದು ಪುರಸ್ಕಾರವನ್ನು "ಗಣರಾಜ್ಯೋತ್ಸವ"** ದಿನದಂದು ನೀಡಿ ಗೌರವಿಸುವ ಪದ್ಧತಿ ಜಾರಿಯಲ್ಲಿರುತ್ತದೆ.

ಅದರಂತೆ, **2016-17 ನೇ ಸಾಲಿನಲ್ಲಿ ಕರಾರಸಾನಿಗಮದ ನೌಕರರು ಮತ್ತು ಅಧಿಕಾರಿಗಳ ಒಟ್ಟು 1095 ಮಕ್ಕಳಿಗೆ ರೂ.25,88,000 ಲಕ್ಷಗಳ ನಗದು** ಪುರಸ್ಕಾರವನ್ನು ದಿನಾಂಕ.26.01.2018 ರಂದು ವಿತರಿಸಲಾಗಿದೆ.

ಕರಾರಸಾನಿಗಮದ ಕೇಂದ್ರ ಕಛೇರಿಯಲ್ಲಿ ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಶ್ರೀ.ಬಸವರಾಜಬುಳ್ಳಾ, ಉಪಾಧ್ಯಕ್ಷರು, ಕರಾರಸಾನಿಗಮ ಹಾಗೂ ಶ್ರೀ.ಎಸ್.ಆರ್.ಉಮಾಶಂಕರ್,ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು, ಕರಾರಸಾನಿಗಮ ರವರು ಕೇಂದ್ರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರು ಮತ್ತು ಅಧಿಕಾರಿಗಳ ಮಕ್ಕಳಿಗೆ ನಗದು ಪುರಸ್ಕಾರವನ್ನು ವಿತರಿಸಿದರು. ಈ ಸಂಧರ್ಭದಲ್ಲಿ ಶ್ರೀ.ರವಿ.ಎಸ್,ಭಾಪೋಸೇ ನಿರ್ದೇಶಕರು(ಭದ್ರತಾ&ಜಾಗೃತ), ಶ್ರೀ.ಕೆ.ಶ್ರೀನಿವಾಸ, ಕಆಸೇ, ನಿರ್ದೇಶಕರು(ಸಿ&ಪ) ರವರು ಹಾಗೂ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

ದಿ: 24.01.2018 ರಂದು ಲಾಲಾ ಬಾಗ್‌ನಲ್ಲಿ ಜರುಗಿದ ರಾಜ್ಯ ಮಟ್ಟದ ಫಲಪುಷ್ಪ ಪ್ರದರ್ಶನದ ಕಾರ್ಯಕ್ರಮದಲ್ಲಿ, ಕ.ರಾ.ರ.ಸಾ ನಿಗಮದ ಕೇಂದ್ರ ಕಛೇರಿಯ ಉದ್ಯಾನವನದ ಅತ್ಯುನ್ನತ ನಿರ್ವಹಣೆಗೆ 2017-18ನೇ ಸಾಲಿನ ಸಮಗ್ರ ಪ್ರಶಸ್ತಿ ನೀಡಿ ಗೌರವಿಸಲಾಗಿರುತ್ತದೆ. ಈ ಪ್ರಶಸ್ತಿಯನ್ನು ನಿಗಮದ ಪರವಾಗಿ ಶ್ರೀ.ಬಿ.ಎಸ್.ಕೃಷ್ಣಪ್ಪ, ಸ.ಕಾ.ನಿ ಅಭಿಯಂತರರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಸಹಿ/-

ಸಾರ್ವಜನಿಕ ಸಂಪರ್ಕಾಧಿಕಾರಿ